ಅಪರಾಧ ನಡೆದಿದೆ, ಪ್ರೊಸೆಷನ್ ಆಗಿರತಕ್ಕಂಥದ್ದು 13-8-94ರಲ್ಲಿ ಈ ಮಧ್ಯೆ ಇವರಿಗೆ, ಗೃಹಸಚಿವರಿಗೆ ಸಂಬಂಧಪಟ್ಟಂತೆ ಯಾರಿಂದಲೂ ಯಾವ ವಿಸ್ಪರಿಂಗ್ ಕೂಡ ಇಲ್ಲ ಎನ್ನುವ ಮಾತನ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ಮುಖ್ಯಮಂತ್ರಿಗಳು ನಾನು ಪರ್ಸನಲ್ ಆಗಿ ಅದನ್ನು ತೆಗೆಸಿ ನೋಡುತ್ತೇನೆ ಎಂದು ಹೇಳುತ್ತಿದ್ದಾರೆ. ಆ ರೀತಿ ಇದ್ದರೆ ಮುಂದೆ ಅದಕ್ಕೆ ಬರುತ್ತೇನೆ ಎಂದು ಹೇಳಿದ್ದಾರೆ. ಪ್ರಶ್ನೆ ಇಲ್ಲಿ ಇರತಕ್ಕಂಥದ್ದು ಫೋಟೋ ನೋಡಿದ ಮೇಲೆ ಏನು ಅಪರಾಧಿಗಳು ಇದ್ದಾರೆ . ಮಂತ್ರಿಗಳು ಅವರ ಜೊತೆಯಲ್ಲಿ ಮೆರವಣಿಗೆ ಮಾಡುತ್ತಿದ್ದಾರೆ, ಅವರಿಗೂ ಇವರಿಗೂ ಸಂಬಂಧ ಇದೆ ಎನ್ನುವುದನ್ನು ಹೇಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ತಾವು ನಿರ್ವಿವಾದವಾದಂಥ ರೀತಿಯಲ್ಲಿ ಸಂಬಂಧ ಇದೆ ಎನ್ನುವುದನ್ನು ಹೇಳುವಂಥದ್ದಲ್ಲ. ಆ ದೃಷ್ಟಿಯಿಂದ ನಾನೇ ಪರ್ಸನಲ್ ಆಗಿ ತೆಗೆದು ಅದನ್ನು ವೆರಿಫೈ ಮಾಡಿ ಮಾಡಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ವಿರೋಧ ಪಕ್ಷದ ನಾಯಕರು ಮತ್ತೆ ಮತ್ತೆ ಅದನ್ನು ಒತ್ತಾಯ ಮಾಡತಕ್ಕಂಥದ್ದು ಸರಿಯಲ್ಲ. ಆ ಒಂದು ಅವಕಾಶವನ್ನು ಮುಖ್ಯಮಂತ್ರಿಗಳಿಗೆ ಕೊಡತಕ್ಕಂಥದ್ದು ಅವಶ್ಯಕ ಆಗುತ್ತದೆ. ತದನಂತರ ಮುಂದೆ ಏನು ಬರುತ್ತದೆ, ಅದನ್ನು ನೋಡಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

Sri R.V. Deshapande : We are not satisfied with the answer of the Home Minister nor the Chief Minister. The Chief Minister is trying to shield the Home Minister.

ಇವರು ಸ್ಥಾನದಲ್ಲಿದ್ದು ರಾಜ್ಯದ ಜನತೆಗೆ ಏನು ಪ್ರೊಟೆಕ್ಷನ್ ಕೊಡಬಹುದು? ಅದರ ಬಗ್ಗೆ ಅನುಮಾನ ಇದೆ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಮಾರಲ್ ವ್ಯಾಲ್ಯೂನ್ ಬಗ್ಗೆ ಮಾತನಾಡುತ್ತಾರೆಯೇ ವಿನಹ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಯಾವುದೋ ನೆವ ಇಟ್ಟುಕೊಂಡು ಹೇಳುತ್ತಾರೆ. ಆದ್ದರಿಂದ ನಮ್ಮ ಪಕ್ಷದವರು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳದ ಸದಸ್ಯರುಗಳು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು : ಗೃಹಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಈ ಹೇಳಿಕೆಯನ್ನು ನೀಡಿದ ನಂತರ ಈ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಿ ಸದನದ ಕಲಾಪಗಳನ್ನು ಮುಂದೂಡಿ ಮತ್ತೆ 3 ಗಂಟೆಗೆ ಸೇರೋಣ.

(ಸಭೆಯು 1-55ಕ್ಕೆ ಮುಕ್ತಾಯಗೊಂಡು ಮತ್ತೆ 3-00 ಗಂಟೆಗೆ ಸೇರುವುದು.)

ಸಭೆ ಪುನಃ ಮಧ್ಯಾಹ್ನ 3.30ಕ್ಕೆ ಪ್ರಾರಂಭವಾಯಿತು ಸಭಾಧ್ಯಕ್ಷರಾದ ಶ್ರೀ ವಿ.ಎಸ್.ಕೌಜಲಗಿಯವರು ಪೀಠವನ್ನಲಂಕರಿಸಿದರು)

<u>ವಿತ್ತೀಯ ಕಾರ್ಯಕಾಲಾಪಗಳು</u>

ಅಧ್ಯಕ್ಷರು : ಈಗ 1994-95ನೇ ಸಾಲಿನ ಈ ಕೆಳಕಂಡ ಬೇಡಿಕೆಗಳನ್ನು ಮತಕ್ಕೆ ಹಾಕುವುದು.